V-, 31 N5
N5 7- 11
03147 4

ಶ್ರೀ ಕೆ. ಲಕ್ಕಪ್ಪ.—ಮೈಸೂರು ಸಂಸ್ಥಾನದಲ್ಲಿ ಒಟ್ಟು ಎಷ್ಟು ಪವರ್ ಉತ್ಪತ್ತಿಯಾಗುತ್ತದೆ ?

Mr. SPEAKER.—This question has already been answered.

ಶ್ರೀ ಕೆ. ಲಕ್ಕಪ್ಪ.—ಹೈದರಾಬಾದು ಮತ್ತು ಆಂಧ್ರ ದೇಶಗಳಿಗೆ ಯಾವಾಗ ವಿದ್ಯುಚ್ಛಕ್ತಿಯನ್ನೊದಗಿಸುತ್ತೀರಿ ? ಯಾವರೀತಿ ಒದಗಿಸುತ್ತೀರಿ ?

ಡಾ॥ ಆರ್. ನಾಗನಗೌಡ.—ಬಳ್ಳಾರಿಯು ಮದ್ರಾಸು ರಾಜ್ಯದಲ್ಲಿದ್ದಾಗ ನಾಲ್ಕುಸಾವಿರ ಕಿಲೋ ವಾಟ್ಸು ಕೊಡುತ್ತೇವೆಂದು ಒಪ್ಪಿದ್ದೆವು. ಈಗ ಬಳ್ಳಾರಿ ಜಿಲ್ಲೆಯಲ್ಲಿ ಆದವಾನಿ, ಅಲೂರು, ಗುಂತ ಕಲ್ಲು—ಈ ಪ್ರಾಂತಗಳಿಗೆ ಕೊಂಚ ತೆಗೆದುಕೊಂಡಿದ್ದಾರೆ. ಇದುವರೆಗೆ 1—10—53 ರಲ್ಲಿ 720 ಕಿಲೋವಾಟ್ಸು ತೆಗೆದುಕೊಂಡಿದ್ದಾರೆ. ಪುನಃ ನಮಗೆ ಇಷ್ಟು ಪವರ್‌ಕೊಡಿ ಎಂದು ಈ ಮೂರು ನಾಲ್ಕು ತಿಂಗಳಲ್ಲಿ ಕೇಳಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಈ ವಿಚಾರವಾಗಿ ಮೈಸೂರು ಸರ್ಕಾರದವರಿಗೇನಾದರೂ ಪತ್ರ ಬಂದಿದೆಯೇ ?

*ಡಾ॥ ಆರ್. ನಾಗನಗೌಡ.—Government Level ನಲ್ಲಿ ಆಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಒಂದುವರ್ಷದ ಹಿಂದೆ ಚೀಫ್ ಮಿನಿಸ್ಟರ್‌ರವರು ಮಂಗಳೂರಿಗೆ ಹೋದಾಗ ಅವರು Power ಕೇಳಿದಾಗ ಸುಮಾರು ಎರಡುಸಾವಿರ ಕಿಲೋ ವಾಟ್ಸ್‌ನಷ್ಟು ಕೊಡಲು ಸಾಧ್ಯವೆಂದು ಹೇಳಿರುವುದುಂಟೇ ?

ಡಾ॥ ಆರ್. ನಾಗನಗೌಡ.—ಮಂಗಳೂರಿನವರಿಗೆ ಕೊಡುವುದು ಒಳ್ಳೆಯದೇ.

ಶ್ರೀ ಕೆ. ಲಕ್ಕಪ್ಪ.—ಮೈಸೂರು ದೇಶದವರಿಗೇ ದೊಡ್ಡ ಕೈಗಾರಿಕೆಗಳಿಗೆ power ಇಲ್ಲದೇ ಇರುವಾಗ ಹೀಗೆ ಮಾಡಬಹುದೇ ?

ಡಾ॥ ಆರ್. ನಾಗನಗೌಡ.—ಮಂಗಳೂರಿನವರ agreement ಬಹಳ ದಿನದ ಹಿಂದೆಯೇ ಆಗಿರಬೇಕು. ಆದಕಾರಣ ಕೊಡಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಮೈಸೂರು ದೇಶದಲ್ಲಿ ಎಲ್ಲೆಲ್ಲಿ power ಅವಶ್ಯಕವಾಗಿ ಬೇಕೋ ಅಲ್ಲಿಗೆ ಕೊಡಲು ಸಾಧ್ಯವಿದೆಯೇ ?

ಡಾ॥ ಆರ್. ನಾಗನಗೌಡ.—ಈಗ ನಾವು 1 ಲಕ್ಷ 10 ಸಾವಿರ ಕಿಲೋವಾಟ್ಸ್ ಉಪಯೋಗಿಸುತ್ತೇವೆ. ಉತ್ಪತ್ತಿ ಮಾಡುವುದು ಒಂದು ಲಕ್ಷ ನಲವತ್ತು ಸಾವಿರ ಕಿಲೋವಾಟ್ಸ್ ವರೆಗೆ ಆಗುತ್ತದೆ. 1956 ನೆಯ ಇಸವಿಯವರೆಗೆ ನಮಗೆ power ಇದೆ.

Mr. SPEAKER.—These questions have been put and answered.

ಶ್ರೀ ಕೆ. ಲಕ್ಕಪ್ಪ.—1956ನೆಯ ಇಸವಿಯಿಂದಾಚೆಗೆ ಏನು ಏರ್ಪಾಡು ಮಾಡಬೇಕೆಂದಿರುತ್ತೀರಿ ?

ಡಾ॥ ಆರ್. ನಾಗನಗೌಡ.—ತಮಗೆ ತಿಳಿದಿರುವಂತೆ ಪಿಂಪಾ ಎಕ್ಸ್‌ಟೆಷ್ಷ್ ಸ್ಕೀಂ ಆಗುವುದರಲ್ಲಿದೆ. ಹೊನ್ನೇಮರಡು ಯೋಜನೆ ಆಲೋಚನೆಯಲ್ಲಿದೆ. ಆ ಸಮಯದಲ್ಲಿ ನೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಜೆ. ನಾರಾಯಣಗೌಡ.—ಹೊನ್ನೇಮರಡು ಯೋಜನೆಯನ್ನು ಸಾಧ್ಯವಾದಷ್ಟು ಜಾಗ್ರತೆ ಕ್ಯಗೊಳ್ಳುವ ಯೋಚನೆಯನ್ನು ಕೇಂದ್ರ ಸರ್ಕಾರದೊಡನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಇದರ ಬಗ್ಗೆ ಈಗಾಗಲೇ ತೀವ್ರ ಗಮನಕೊಡುತ್ತಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೇಂದ್ರ ಸರ್ಕಾರದವರು ಪಿಂಪಾ ಎಕ್ಸ್‌ಟೆಷ್ಷ್ ಬಗ್ಗೆ ಕೆಲಸ ನಿರ್ವಹಿಸಲು ಹಣ ಕೊಟ್ಟಿರುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಪಿಂಪಾ ಎಕ್ಸ್‌ಟೆಷ್ಷ್ ಸ್ಕೀಂ ಮತ್ತು ಹೊನ್ನೇಮರಡು ಯೋಜನೆ—ಎರಡೂ ಆಲೋಚನೆಯಲ್ಲಿವೆ.

Mr. SPEAKER.—It will be included in the Second Five-Year Plan. as already stated.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪಿಂಪಾ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದ ನೆರವು ದೊರೆತಿದೆಯೇ ?

Dr. R. NAGAN GOWDA.—No, Sir.

ಶ್ರೀ ಎಸ್. ಮಾಧವಾಚಾರ್.—ಹೊನ್ನೇಮರಡು ಯೋಜನೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಪ್ರದೇಶ ಮುಳುಗಡೆಯಾಗುತ್ತದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

Sri G. A. THIMMAPPA GOWDA.—What is the minimum requirement of electricity in the State ? Is the electricity available enough to meet requirements ?

Dr. R. NAGAN GOWDA.—I said that up to 1956 we will be in a position to meet the normal requirements.

National Extension Scheme Blocks.

Q.—115. Sri S. SRINIVASA IYENGAR (T.-Narsipur).—

Will the Government be pleased to state :

(*a*) the number of National Extension Scheme Blocks recently sanctioned to the Government of Mysore ;

(*b*) the names of the areas selected for working these blocks ;

(*c*) the policy kept in view by the Government while selecting these areas in the State ;

(*d*) whether the Hon'ble the Agriculture Minister had assured in the last Budget Session that the claims of certain Taluks will be considered at the time of the next allotment ;

(*e*) if so, what are the Taluks whose claims were pressed for during the last Budget Session ;

(*f*) whether these taluks have been selected for working the National Extension Scheme Blocks ;

(*g*) if not, why ?

A.—Dr. R. NAGAN GOWDA Minister for Agriculture).—

(*a*) Seven (including the Pilot Training *cum* Development Project at

(DR. R. NAGAN GOWDA.)

Malavalli converted into a National Extension Service Block with effect from 1st April 1954.

(*b*) (1) Mudigere Taluk.

(2) Holenarsipur and Arkalgud Taluks.

(3) Siraguppa Taluk.

(4) Holalkere Taluk.

(5) Srinivasapur Taluk.

(6) Gubbi Taluk [Chandrasekharapura Hobli and Tumkur Taluk (Hebbur Hobli) and some villages of Kadaba Hobli and Kasaba Hobli of Gubbi Taluk].

(*c*) The guiding principle is to make available the benefits of the scheme to rural population all over the State by stages.

(*d*) Yes.

(*e*) Tumkur.

(*f*) Yes.

(*g*) Does not arise in view of reply to (*f*) above.

ಶ್ರೀ ಎಸ್. ಶ್ರೀನಿವಾನಯ್ಯಂಗಾರ್.—ಕಳೆದ ಅಧಿವೇಶನದಲ್ಲಿ ಈ ನ್ಯಾಷನರ್ ಎಕ್ಸ್‌ಟೆರ್ಷ್ ಸ್ಕೀಮನ್ನು ತಾಲ್ಲೂಕುವಾರು ಕಾರ್ಯ ರೂಪಕ್ಕೆ ತರುವುದು ಸಾಧ್ಯವಿಲ್ಲವೆಂದು ತಿಳಿಸಿಲ್ಲವೇ ?

*DR. R. NAGAN GOWDA.—I have to bring to the notice of the Hon'ble Member who has put this question the answer that I gave to Question No. 1030 of Sri T. N. Mudalagiri Gowda wherein I had said that this whould be borne in mind.

ಶ್ರೀ ಎಸ್. ಶ್ರೀನಿವಾನಯ್ಯಂಗಾರ್.—ಇದರ ಅವಶ್ಯಕತೆಯ ಬಗ್ಗೆ cut motion ಮೂಲಕ ನಹ ಸರ್ಕಾರದ ಗಮನಕ್ಕೆ ತಂದಾಗ ' It will be kept in view ' ಎಂದು ಉತ್ತರ ಕೊಟ್ಟಿಲ್ಲವೇ ?

MR. SPEAKER.—Even now it is being kept in view.

ಶ್ರೀ ಎಸ್. ಶ್ರೀನಿವಾನಯ್ಯಂಗಾರ್.—ಈಗ ತಾವು select ಮಾಡಿರುವ ಆರು ಬ್ಲಾಕ್‌ಗಳ ಪೈಕಿ ಮಂತ್ರಿಗಳಿಗೆ ಸಂಬಂಧಪಟ್ಟ ಕ್ಷೇತ್ರಗಳು ಸೇರಿವೆಯೇ ?

DR. R. NAGAN GOWDA.—I do not understand the question.

SRI S. SRINIVASA IYENGAR.—Out of the six blocks selected, which are the constituencies which relate to the Hon'ble Members ?

DR. R. NAGAN GOWDA.—Notice.

Veterinary Dispensary at Kottur firka headquarters.

Q.—122. SRI K. KOTRABASAVANA GOWDA (Kudligi).—

Will the Government be pleased to state :—

(*a*) what the cattle population is of Kottur firka in Kudligi Taluk ;

(*b*) whether they will open a regular veterinary dispensary with equipment at Kottur firka headquarters ?

A.—DR. R. NAGAN GOWDA (Minister for Agriculture).—

(*a*) Cattle	...	15,177
Buffaloes	...	8,370
Total	...	23,547

(*b*) The matter is under the consideration of Government.

ಶ್ರೀ ಕೊಟ್ರಬಸವನಗೌಡ.—ಕೊಟ್ಟೂರಿನಲ್ಲಿ ಡಿಸ್ಪೆನ್ಸರಿಯೊಂದನ್ನು ತೆರೆಯುವ ವಿಚಾರದಲ್ಲಿ ಎಷ್ಟರವರೆಗೆ ಮುಂದುವರಿದಿದ್ದೀರಿ ?

ಡಾ॥ ಆರ್. ನಾಗನಗೌಡ.—ಈಗ ಕೊಟ್ಟೂರಿನಲ್ಲಿ ಒಂದು ಡಿಸ್ಪೆನ್ಸರಿ ಇದೆ. ಅದನ್ನು up grade ಮಾಡುವ ವಿಚಾರ ಆರೋಗ್ಯನೆಯಲ್ಲಿದೆ.

Rural Electrification in Chitaldrug District.

Q.—285. SRI MULKA GOVINDA REDDY (Chitaldrug).—

Will the Government be pleased to state :—

(*a*) how many applications for rural electrification in Chitaldrug District have been received for the last three years ;

(*b*) for how many villages sanction has been given ;

(*c*) how many and for what villages applications are pending and where they are pending ;

(*d*) why there is delay ?

A.—DR. R. NAGAN GOWDA (Minister for Agriculture).—

(*a*) Applications have been received in respect of 54 villages.

(*b*) Ten.

(*c*) The remaining applications pertaining to 44 villages are in various stages. A statement giving particulars is appended below.

(*d*) Please see the statement furnished in reply (*c*) above.